

'ಸರಳ ಪ್ರೇಮಕಥೆ'ಯಲ್ಲಿ ವಿನಯ್ ರಾಜ್‌ಕುಮಾರ್



ವಿಜಯ್: ಭರ್ಜರಿ 'ಭೀಮ'

ಅಪರೂಪ. ಹಾಗಾಗಿ, ಪೃಥ್ವಿ ಕೊಣನೂರು, ಜೈಶಂಕರ್, ಚಂಪಾ ಶೆಟ್ಟಿ, ಉತ್ಸವ್ ಅವರಂಥ ನಿರ್ದೇಶಕರ ಸಿನಿಮಾಗಳು ಚಿತ್ರಮಂದಿರಗಳಲ್ಲಿ ತೆರೆಕಂಡು ಯಶಸ್ಸು ಸಾಧಿಸುವುದು ಕಷ್ಟ. ಆದರೆ, ಅಪ್ಪಟ ವ್ಯಾಪಾರಿ ಚಿತ್ರಗಳು ತೆರೆಕಂಡಾಗಲೂ, ಅವುಗಳನ್ನು ಗೆಲ್ಲಿಸಲು ಉದ್ಯಮದ ಮಂದಿ ಬೆನ್ನಿಗೆ ನಿಂತ ಉದಾಹರಣೆಗಳು 2024ರಲ್ಲಿ ಈವರೆಗೆ ಕಾಣಿಸಿಲ್ಲ. ಕನ್ನಡ ಸಿನಿಮಾಗಳ ಬಗ್ಗೆ ಪ್ರೇಕ್ಷಕನಿಗೆ ಉತ್ಸಾಹ ಗರಿಗೆದರದಿರಲು ಒಳ್ಳೆಯ ಸಿನಿಮಾಗಳಿಗೆ ದೊರೆಯದಿರುವ ಪ್ರಚಾರವೂ ಕಾರಣವಾಗಿದೆ.

## ಮುಗಿಸುವ ಮುನ್ನ...

'ವೈಕುಂಠ ಸಮಾರಾಧನೆ' ರಜತ್ ಮೌರ್ಯ ನಿರ್ದೇಶನ, ನಟನೆಯ ಸಿನಿಮಾ. ''ಇದು ನಮ್ಮ ಚಿತ್ರದ 'ಡೆತ್ ಲುಕ್' ಪೋಸ್ಟರ್'' ಎನ್ನುವುದು ಅಡಿಬರಹ. ನಟ–ನಿರ್ದೇಶಕನ ಫೋಟೊದಡಿ ಶ್ರೀ ರಜತ್ ಹೆಸರಿನೊಂದಿಗೆ, ಮುಹೂರ್ತ: 10.8.2024; ರಿಲೀಸ್: 12.12.2025 ಎಂಬ ವಿವರಗಳೂ ಆಹ್ವಾನಪತ್ರಿಕೆಯಲ್ಲಿವೆ. ಅಂದಹಾಗೆ, ರಜತ್ ತಿರುಪತಿ ತಿಮ್ಮಪ್ಪನ ಭಕ್ತರಂತೆ. ಅವರ 'ವೈಕುಂಠ ಸಮಾರಾಧನೆ' ಹಾಸ್ಯಪ್ರಧಾನ ಚಿತ್ರವಂತೆ. ರಜತ್‌ರ ಸಿನಿಮಾ ಗೆಲ್ಲಲೆಂದು ಹಾರೈಸೋಣ. ಆದರೆ, ಅವರ ಸಿನಿಮಾದ ಹೆಸರು ಹಾಗೂ ಉಳಿದ ವಿವರಗಳು ಕನ್ನಡ ಚಿತ್ರರಂಗದ ಇಂದಿನ ಸ್ಥಿತಿಯನ್ನೇ ಸೂಚಿಸುತ್ತಿರುವಂತಿವೆ.

ಕನ್ನಡ ಚಿತ್ರರಂಗ ಈ ಮೊದಲೂ ಬಿಕ್ಕಟ್ಟುಗಳನ್ನು ಕಂಡಿದೆ. ಅಂಥ ಸಂದರ್ಭಗಳಲ್ಲಿ ಚಿತ್ರರಂಗದ ಮಂದಿ ನೇರವಾಗಿ ಜನರ ಬಳಿ ಬಂದಿದ್ದರು. ರಾಜ್‌ಕುಮಾರ್, ನರಸಿಂಹರಾಜು, ಬಾಲಕೃಷ್ಣ, ಜಿ.ವಿ. ಅಯ್ಯರ್ ಅವರಂಥ ಕಲಾವಿದರು ಸಿನಿಮಾದಿಂದ ಅನ್ನ ಹುಟ್ಟದೆ ಹೋದಾಗ ನಾಟಕಗಳ ಮೂಲಕ ಜನರನ್ನು ತಲುಪಲು ಪ್ರಯತ್ನಿಸಿದ್ದರು. ನಾಟಕಗಳ ಮೂಲಕ ಕಾಸಿಗೆ ಕಾಸು ಸೇರಿಸಿ 'ರಣಧೀರ ಕಂಠೀರವ' ಸಿನಿಮಾವನ್ನು 'ಕನ್ನಡ ಚಲನಚಿತ್ರ ಕಲಾವಿದರ ಸಂಘ' ಹೆಸರಿನಲ್ಲಿ ರೂಪಿಸಿದ ಉದಾಹರಣೆಯೂ ಇದೆ. ಸದ್ಯದ ಬಿಕ್ಕಟ್ಟಿನ ಸಂದರ್ಭದಲ್ಲಿ ಕಲಾವಿದರ ನಡುವೆ ಒಗ್ಗಟ್ಟನ್ನು ಕಾಣಲು ಸಾಧ್ಯವೆ? ವಿರುದ್ಧ ಧ್ರುವಗಳಂತೆ ವರ್ತಿಸುವ ನಾಯಕ ನಟರಿಗೆ ಪ್ರೇಕ್ಷಕರ ನೆನಪಾಗುವುದು ತಮ್ಮ ಸಿನಿಮಾ ಬಿಡುಗಡೆ ಆದಾಗಷ್ಟೇ.

ಒಂಬತ್ತು ದಶಕಗಳ ಇತಿಹಾಸದುದ್ದಕ್ಕೂ ಕನ್ನಡ ಚಿತ್ರರಂಗ ಒಂದಲ್ಲಾ ಒಂದು ಬಗೆಯಲ್ಲಿ ಪ್ರೇಕ್ಷಕರ ಸಹಾನುಭೂತಿಯನ್ನೇ ನೆಚ್ಚಿಕೊಂಡು ಬದುಕಿದೆ. ಸಿನಿಮಾದ ಬಿಕ್ಕಟ್ಟುಗಳನ್ನೇ ಕನ್ನಡದ ಸಮಸ್ಯೆಗಳ ರೂಪದಲ್ಲಿ ಬಿಂಬಿಸಿರುವುದೂ ಇದೆ. ಬೇರಾವುದೇ ಕಲಾಪ್ರಕಾರಕ್ಕೆ ಇಲ್ಲದಷ್ಟು ದೊಡ್ಡ ಪ್ರಮಾಣದಲ್ಲಿ ಪ್ರಶಸ್ತಿ–ಸಬ್ಸಿಡಿ–ಸವಲತ್ತುಗಳನ್ನು ರಾಜ್ಯಸರ್ಕಾರ ಚಿತ್ರೋದ್ಯಮಕ್ಕೆ ಕಲ್ಪಿಸಿದೆ. ಇಷ್ಟೆಲ್ಲ ಅನುಕೂಲಗಳನ್ನು ಪಡೆದರೂ ಕನ್ನಡ ಚಿತ್ರರಂಗ ಬದ್ಧತೆ, ಕಾಳಜಿಯನ್ನು ಪ್ರದರ್ಶಿಸಿದ ಉದಾಹರಣೆಗಳು ತೀರಾ ಕಡಿಮೆ.

'ಅಭಿಮಾನಿ ದೇವರು'ಗಳ ವಿಶ್ವಾಸವನ್ನು ಕಳೆದುಕೊಂಡಿರುವ ಇಂದಿನ ಚಿತ್ರರಂಗ ದೇವರುಗಳ ಮೊರೆ ಹೋಗಿದೆ. ಪ್ರೇಕ್ಷಕರನ್ನು ದೇವರ ಶಕ್ತಿಯ ಮೂಲಕ ಚಿತ್ರಮಂದಿರಗಳಿಗೆ ಕರೆಸಿಕೊಳ್ಳಲು ಹೊರಟಿದೆ. 'ಜನರು ಚಿತ್ರಮಂದಿರಗಳ ತೆರೆಯ ಮೇಲೆ ಹಾಸ್ಯವನ್ನು ಬಯಸುತ್ತಾರೆಯೇ ಹೊರತು, ನಿಜಜೀವನದಲ್ಲಿ ಅಲ್ಲ' ಎನ್ನುವುದನ್ನು ಮರೆತರೆ, ಚಿತ್ರೋದ್ಯಮವನ್ನು ಉದ್ಧರಿಸುವುದು ದೇವರಿಗಾದರೂ ಹೇಗೆ ಸಾಧ್ಯ?

ಪ್ರತಿಕ್ರಿಯಿಸಿ: feedback@sudha.co.in